ಓ.ಎಸ್.ನಂ: 166/2021

**ಪಿಡಬ್ಲ್ಯೂ-1**

**ಸಾಕ್ಷಿಯನ್ನು ಕರೆಯಿಸಿ ದಿನಾಂಕ: 03.03.2026 ರಂದು ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಿಂದ:**

ನನ್ನ ತಾಯಿ ಹೆಸರು ಅರಸಮ್ಮ. ಗೋಕುಲಮ್ಮನ ಮಗಳು ಅರಸಮ್ಮ ನಮ್ಮ ಕುಟುಂಬಕ್ಕೆ ಸೇರಿದವರಲ್ಲ ಎಂದರೆ ಸರಿ. ದೊಡ್ಡಮಹದೇವಶೆಟ್ಟಿ ಸಹ ನಮ್ಮ ಕುಟುಂಬಕ್ಕೆ ಸೇರಿದವರಲ್ಲ ಎಂದರೆ ಸರಿ. ಗೋಕುಲಮ್ಮನಿಗೂ ನಮಗೂ ಸಂಬಂಧ ಇಲ್ಲ ಎಂದರೆ ಸರಿ. ಪ್ರತಿವಾದಿ 5 ಮತ್ತು 6 ರವರ ತಂದೆಗೂ ನಮಗೂ ಸಂಬಂಧವಿಲ್ಲ ಎಂದರೆ ಸರಿ. ದಾವಾ ಸ್ವತ್ತಿನ ಸರ್ವೇ ನಂ: 480 ರಲ್ಲಿ 2 ಎಕರೆಗೆ ದಾವೆ ಹೂಡಿದ್ದೇನೆ. ದಾವಾ ಸ್ವತ್ತಿನ ಚೆಕ್ಕುಬಂದಿ ಪೂರ್ವಕ್ಕೆ-ಮರಿದಾಸ ಮತ್ತು ಕೆವಡಯ್ಯರವರ ಜಮೀನು, ಪಶ್ಚಿಮಕ್ಕೆ-ಗೋಪಶೆಟ್ಟರವರ ಜಮೀನು, ಉತ್ತರಕ್ಕೆ-ಕರಿಶೆಟ್ಟರವರ ಹೆಂಡತಿ ಚಿಕ್ಕಗೋಪಮ್ಮರವರ ಜಮೀನು ಮತ್ತು ದಕ್ಷಿಣಕ್ಕೆ-ಕೊಂಡಯ್ಯ ಮತ್ತು ಹೊಟ್ಟಯ್ಯರವರ ಜಮೀನು. 1881 ರಲ್ಲಿ ದಾವಾ ಸ್ವತ್ತು ನಮಗೆ ಕ್ರಯವಾಗಿರುತ್ತದೆ. ಅದನ್ನು ಕಾಳಯ್ಯಶೆಟ್ಟರವರ ಮಗಳು ಗೋಕುಲಮ್ಮರವರಿಂದ ಖರೀದಿ ಮಾಡಿರುತ್ತೇವೆ. ಸರ್ವೇ ನಂ: 430 ರಲ್ಲಿ ನಮ್ಮ ಮಾರಾಟಗಾರರ ಜಮೀನು ಇತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಅವರು ಬರೆದುಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ.

ಸರ್ವೇ ನಂ: 480 ಮತ್ತು ಸರ್ವೇ ನಂ: 430 ರ ಜಮೀನುಗಳು ಬೇರೆ ಬೇರೆ ಎಂದರೆ ಸರಿಯಲ್ಲ. ನಮ್ಮ ಕ್ರಯ ಪತ್ರದಲ್ಲಿ ಸರ್ವೇ ನಂ: 480 ಎಂದು ನಮೂದು ಇದೆ. ಸರ್ವೇ ನಂ: 430 ಕಾಳಶೆಟ್ಟಿಯ ಮಗಳು ಗೋಕುಲಮ್ಮರವರ ಹೆಸರಿನಲ್ಲಿ ಇತ್ತು ಎಂದು ತೋರಿಸಲು ಆರ್.ಟಿ.ಸಿ ಹಾಜರುಪಡಿಸಿದ್ದೇನೆ. ಸದರಿ ಗೋಕುಲಮ್ಮರವರಿಗೆ ಸರ್ವೇ ನಂ: 430 ಹೇಗೆ ಬಂದಿತ್ತು ಎಂದು ತೋರಿಸಲು ದಾಖಲೆ ನೀಡಿಲ್ಲ. ಸರ್ವೇ ನಂ: 480 ರ ಖಾತಾ ಗೋಕುಲಮ್ಮರವರ ಹೆಸರಿನಲ್ಲಿ ನಮೂದು ಇತ್ತು ಎಂದರೆ ಸರಿ. ಸದರಿ ಜಮೀನನ್ನು ನಮಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ನಮಗೆ ಕ್ರಯಕ್ಕೆ ಕೊಡುವ ಮುನ್ನಾ ಗೋಕುಲಮ್ಮರವರೆ ವ್ಯವಸಾಯ ಮಾಡುತ್ತಿದ್ದು ನಂತರ ನಮಗೆ ಮಾರಾಟ ಮಾಡಿದ್ದರು

ಎಂದರೆ ಸರಿ. ಸರ್ವೇ ನಂಃ 430 ರಲ್ಲಿ ಸದರಿ ಗೋಕುಲಮ್ಮ ಸ್ವಾಧೀನದಲ್ಲಿ ಇರಲಿಲ್ಲ ಮತ್ತು ಆಕೆಯ ಹೆಸರಿನಲ್ಲಿ ಖಾತಾ ಇರಲಿಲ್ಲ ಎಂದರೆ ಸರಿ.

ಬೆಳ್ಳಶೆಟ್ಟರವರ ಹೆಂಡತಿ ಅರಸಮ್ಮ ಸರ್ವೇ ನಂಃ 430 ರಲ್ಲಿ 4 ಎಕರೆ 38 ಗುಂಟೆಯಲ್ಲಿ ಸ್ವಾಧೀನದಲ್ಲಿದ್ದು, ಆಕೆಯ ಖಾತಾದಾರಳಾಗಿದ್ದಳು ಎಂದರೆ ಸರಿಯಲ್ಲ. ಸರ್ವೇ ನಂಃ 430 ರ ಚೆಕ್ಕುಬಂದಿ ಪೂರ್ವಕ್ಕೆ-ನರಸಮ್ಮರವರ ಜಮೀನು, ಪಶ್ಚಿಮಕ್ಕೆ-ಸಿದ್ದಶೆಟ್ಟಿ ರವರ ಜಮೀನು, ಉತ್ತರಕ್ಕೆ-ಚಿಕ್ಕಹೊನ್ನಮ್ಮ ರವರ ಜಮೀನು ಮತ್ತು ದಕ್ಷಿಣಕ್ಕೆ-ಬುಡುಕಯ್ಯರವರ ಜಮೀನು ಎಂದರೆ ಸರಿಯಲ್ಲ. ಸರ್ವೇ ನಂಃ 480 ಮತ್ತು 430 ಮೂಲತಃ ಯಾರಿಗೆ ಸೇರಿದ್ದು ಎಂದು ನಾನು ತಿಳಿದುಕೊಂಡಿಲ್ಲ. ಅರಸಮ್ಮ 7ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಸ್ವತ್ತಿನಲ್ಲಿ 7ನೇ ಪ್ರತಿವಾದಿಯೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ದಿಃ 02.11.2022 ರಂದು 1ನೇ ಪ್ರತಿವಾದಿ 7ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯದಂತೆ 7ನೇ ಪ್ರತಿವಾದಿ ಹೆಸರಿಗೆ ಆರ್.ಟಿ.ಸಿ ನಮೂದಾಗಿದೆ ಎಂದರೆ ಗೊತ್ತಿಲ್ಲ. ಗೋಕುಲಮ್ಮ ಸರ್ವೇ ನಂಃ 430 ರ ಮಾಲೀಕಳಾದ ಕಾರಣ ನಮಗೆ ಸದರಿ ಸ್ವತ್ತನ್ನು ಮಾರಾಟ ಮಾಡಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ.

**ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ, ಸಮಯ ನೀಡಿ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**
ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಗುಂಡ್ಲುಪೇಟೆ